ಇಲ್ಲಿದೆ' ಎಂದು ಸೊಂಟದಲ್ಲಿ ಸಿಕ್ಕಿಸಿದ್ದ ಬೀಗದ ಕೈ ಕೊಟ್ಟು ಹೇಳಿದ, 'ಅವರು ಹೋಗುವುದಕ್ಕೆ ಎರಡು ದಿನದ ಮೊದಲು ಮಹಡಿಯ ಮೇಲೆ ಅಮರ ಮತ್ತು ಸನ್ನಿಯ ನಡುವೆ ಭಾರಿ ಜಗಳ ಆಯಿತು. ಏನೆಲ್ಲ ಬೈಗಳು ಮತ್ತು ಹೊಡೆಯುವ ಬಡಿಯುವ ಸದ್ದು ಕೂಡ ಕೇಳಿಸಿತು. ಅದರ ಮರುದಿನ ಅದೇ ರೀತಿ ಮತ್ತೆ ಜಗಳ ಬೈಗಳು ಕೇಳಿಸಿತು. ಅಮರರ ಬೈಗಳ ಸದ್ದಿಗಿಂತ ಸನ್ನಿಯ ಬೈಗಳ ಸದ್ದೇ ಜೋರಾಗಿತ್ತು'.

'ಅವ್ರು ಹೇಗೆ ಹೋದ್ರು? ಖಾಲಿ ಕೈಯಲ್ಲಿ ಹೋದ್ರೆ?'ಅಭಿ ಕೇಳಿದ. ಅಲ್ಲ ಅಣ್ಣಾವ್ರೆ, ಆಟೊದಲ್ಲಿ ಎರಡು ದೊಡ್ಡ ಸೂಟ್‌ಕೇಸ್ ಹಾಕಿಕೊಂಡು ಹೋದ್ರು. ಸೂಟ್‌ಕೇಸ್ ತುಂಬಾ ಭಾರವಾಗಿತ್ತು. ಅವರ ಆಟೊ ಹೋದ ಒಂದೇ ನಿಮಿಷದ ನಂತರ ಒಂದು ಕೆಂಪು ಕಾರು ಅದನ್ನು ಹಿಂಬಾಲಿಸಿತು. ಕಾರು ಯಾರದು ಎಲ್ಲಿಂದ ಬಂತು ಅಂತ ನಮಗೆ ಏನೂ ಗೊತ್ತಾಗಲಿಲ್ಲ.

ಅವರ ಬಗ್ಗೆ ಮಾತೂ ಬೇಡ, ಯೋಚನೆಯೂ ಬೇಡ ಎಂದುಕೊಂಡು ಅಪ್ಪ ಮಗ ಹೋಟೆಲ್ ವಾಸದ ಕೋಣೆಗೆ ಬಂದರು.

'ಇನ್ನು ಇವತ್ತು ರಾತ್ರಿ ಊಟ ಬೇಡ, ಹಣ್ಣು ತಿಂದರೆ ಸಾಕು' ಎಂದು ಹೇಳಿ ಅಭಿ ಅಂಗಡಿಯಿಂದ ಕಿತ್ತಳೆ ಮತ್ತು ಸೇಬು ಖರೀದಿಸಿ ತಂದ.

ಅಪ್ಪ ಮಗ ಹಣ್ಣು ತಿಂದು ಸೋಫಾದಲ್ಲಿ ಕುಳಿತರು. ದಿನದ ಪೇಪರು ಟೀಪಾಯಿ ಮಾಲೆ ಇತ್ತು. ಅಭಿ ಸ್ವಲ್ಪ ಹೊತ್ತು ಪುಟ ತಿರುವುತ್ತಾ ಕುಳಿತ. ನರಹರಿ ಮೌನವಾಗಿಯೇ ಇದ್ದ.

ಅಭಿ ಪೇಪರ್ ಕೆಳಗಿರಿಸಿ, ಅಪ್ಪಾ, 'ಒಬ್ಬ ವ್ಯಕ್ತಿಯ ನಡೆ ನುಡಿ ಒಳ್ಳೆಯದಿರಲಿ ಇಲ್ಲದಿರಲಿ, ನಮಗೆ ಆತನಿಂದಾದ ಒಳ್ಳೆಯದರ ನೆನಪು ನಮ್ಮ ಮನಸ್ಸಿನಲ್ಲಿ ಇರಬೇಕು, ಆತನಿಂದಾದ ಕೆಟ್ಟದರ ನೆನಪು ನಮ್ಮ ಮನಸ್ಸಿನಲ್ಲಿ ಇರಬಾರದು ಅಲ್ವಾ?'

'ನಿಜ' ಎಂದ ನರಹರಿ.

ಅಪ್ಪ ಎರಡು ಅಕ್ಷರಗಳ ಉತ್ತರವನ್ನೇ ನೀಡುತ್ತಿರುವುದನ್ನು ಏನಾದರೂ ಮಾತಾಡಿ ಬದಲಾಯಿಸಬೇಕು ಎಂದುಕೊಂಡು ಅಭಿ,'ಕೇವಲ ಕೆಟ್ಟದನ್ನು ಮಾತ್ರ ಮಾಡಿದ ಮನುಷ್ಯನನ್ನು ಮರೆಯುವುದು ಹೇಗೆ? ಒಳ್ಳೆಯದನ್ನು ಮಾಡಿದವನನ್ನು ನೆನಪಿಸುವಾಗ ಅವನೂ ಬರುತ್ತಾನಲ್ಲಾ?'

'ಅವನನ್ನು ಮರೆಯುವುದಲ್ಲ, ಆತ ಕಣ್ಣಿಗೆ ಬಿದ್ದರೂ ನಮ್ಮ ಪಾಲಿಗೆ ಸತ್ತಿದ್ದಾನೆ ಎಂದು ಪರಿಭಾವಿಸಬೇಕು' ನರಹರಿಯೆಂದ.

'ಅಪ್ಪಾ, ನೀವು ನಿಮ್ಮ ಮುಂದಿನ ಬದುಕು ಹೇಗೆ ಇರಬೇಕು ಎಂಬ ನಿರ್ಧಾರವನ್ನೇನಾದರೂ ಮಾಡಿದ್ದೀರಾ?'

'ಇಲ್ಲ ಅಭಿ'

'ಅಂಥ ನಿರ್ಧಾರದ ಅಗತ್ಯ ಇಲ್ಲವೆ?'

'ಇದೆ, ಆದರೆ ಅದು ಪ್ರಯತ್ನದಿಂದಲ್ಲ, ಯೋಚನೆಯಲ್ಲಿ ತಾನಾಗಿ ಮೂಡಿ ಬರಬೇಕು'

'ಅದೇನೇ ಇರಲಿ, ನೀವು ವೈರಾಗ್ಯವನ್ನು ತೊರೆದರೆ ನಾನು ಅಪಾರವಾದ ಸಂತೋಷದಿಂದಿರುತ್ತೇನೆ. ನನ್ನ ಮುಂದಿನ ಬದುಕು ಹೇಗಿರಬೇಕು ಎಂದು ನಿರ್ಧರಿಸುತ್ತೇನೆ. ವಿರಾಗಿಯಾಗಿಯೂ ಅಲ್ಲ, ಸಂಸಾರಿಯಾಗಿಯೂ ಅಲ್ಲ. ಕೇವಲ ಮನುಷ್ಯ ಹೇಗಿರಬೇಕೋ ಹಾಗೆ ಇರುತ್ತೇನೆ. ನನ್ನ ಬದುಕನ್ನು ನೋಡಿ ನೀವು ಸಂತೋಷಪಡಬೇಕು, ನಿಮ್ಮ ಬದುಕನ್ನು ನೋಡಿ ನೀವು ಸಂತೋಷವಾಗಿರಬೇಕು. ನಾವು ಇಬ್ಬರೇ ಒಂದು ಕುಟುಂಬ ಎಂಬಂತಿರಬೇಕು, ಏನು ಹೇಳ್ತೀರಿ?'

ನರಹರಿ ಮೌನವಾಗಿದ್ದ. ಅಭಿ ಕೂಡ ಮೌನವಾಗಿದ್ದ. ಮಾತು ಮತ್ತು ಮೌನದ ಕುರಿತು ಗುರು ಶಾಂತಿ ಹೇಳಿದ್ದು ನೆನಪಿಗೆ ಬಂತು.

ಕೆಲ ದಿನಗಳ ನಂತರ ನರಹರಿ ಹೇಳಿದ, 'ಅಭಿ, ನಿನ್ನ ಅಭಿಪ್ರಾಯ ನನಗೆ ಸರಿ ಎನಿಸಿದೆ. ದೀರ್ಘಕಾಲ ಬದುಕಬೇಕು ಎಂಬ ಬಯಕೆಯೂ ವ್ಯರ್ಥ, ಅದಕ್ಕೆಂದೇ ಮಾಡುವ ಪ್ರಯತ್ನಗಳೂ ವ್ಯರ್ಥ. ಕೊನೆಗೆ ಮನುಷ್ಯ ಉಳಿಸಿಕೊಳ್ಳುವುದು ಏನೂ ಇಲ್ಲ. ವೈರಾಗ್ಯ ಅಥವಾ ಸನ್ಯಾಸ ಕೂಡ ಯಾಕೆಂದರಿಯದೆ ಉಳಿಯುವ ಪ್ರಯತ್ನವೆಂದೇ ತಿಳಿಯಬೇಕು. ಜೀವ ಇರುವಷ್ಟು ಕಾಲ ನಾರ್ಮಲ್ ಆಗಿರುವ ಬದುಕನ್ನೇ ಬದುಕಬೇಕು. ಅಂದರೆ ಉಣ್ಣುವ ತಿನ್ನುವ ವಸ್ತುಗಳಿಂದ ತೊಡಗಿ ಬದುಕಿನ ಸಕಲ ಕ್ರಿಯೆಗಳೂ ನಾರ್ಮಲ್ ಆಗಿರಬೇಕು. ನಾರ್ಮಲ್ ಆಗಿರುವ, ಶಾಂತಿ, ಸಮಾಧಾನ ಸಂತೋಷವನ್ನು ನೀಡುವಂಥದೇನನ್ನಾದರೂ ಮಾಡಿಕೊಂಡು ಕೊನೆಯ ಉಸಿರಿನವರೆಗೂ ಸಂತೋಷವಾಗಿಯೇ ಇರಬೇಕು' ಎಂದು ಕ್ಷಣ ತಡೆದು, ಯಾವುದೋ ಸಿಕ್ಕಿನಿಂದ ಬಿಡುಗಡೆಗೊಂಡಂಥ ಶಾಂತತೆಯಲ್ಲಿ, 'ನೀನು ವ್ಯಕ್ತಪಡಿಸಿದ ಅಭಿಪ್ರಾಯ ಕೂಡ ಇದೇ ಅಂದುಕೊಂಡಿದ್ದೇನೆ'

'ಹೌದು ಅಪ್ಪ, ಇದೇ. ಹೀಗೆ ಬದುಕಲು ಸಾಧ್ಯ ಎಂದು ಯಾರಿಗೋ ತೋರಿಸಲಿಕ್ಕೆ ಅಲ್ಲ, ಯಾವುದೇ ಪ್ರಶ್ನೆಗೆ ಉತ್ತರವೆಂಬಂತೆ ಅಲ್ಲ. ಕೇವಲ ಬದುಕಿರಲು, ಸರಿಯೆ ಅಪ್ಪಾ?'

'ಸರಿ. ಕಳೆದು ಹೋದುದು ಅಳಿದು ಹೋಯಿತು ಎಂದು ನಾನು ಭಾವಿಸುವುದು ಕಷ್ಟವೇನಲ್ಲ. ನೈಸರ್ಗಿಕವಾಗಿ ಸಂಭವಿಸುವುದು ಸಂಭವಿಸಿಯೇ ಸಂಭವಿಸುತ್ತದೆ. ಆದರೆ ನಾವು ಬದುಕಿರುವವರೆಗೆ ಎಲ್ಲಿ ಬದುಕಬೇಕು, ಹೇಗೆ ಬದುಕಬೇಕು ಎಂದು ನಿರ್ಧರಿಸಬೇಕಾಗುತ್ತದೆ ಅಭಿ. ಬದುಕಿನ ಬಗ್ಗೆ ಮಾತಾಡುವಷ್ಟೇ ನಿರಾಳವಾಗಿ ಸಾವಿನ ಬಗ್ಗೆಯೂ ಮಾತಾಡಬೇಕು. ಎಷ್ಟು ವರ್ಷಗಳ ಕಾಲ ನಾವು ಏನೆಲ್ಲ ಭಾರಗಳ ಮೂಟೆಗಳನ್ನು ಎತ್ತಿಕೊಂಡು ಓಡಾಡಿದ್ದೇವೆ! ಕೊನೆಗೆ ಏನನ್ನೂ ನಾವು ಕೊಂಡುಹೋಗುವುದಿಲ್ಲವಾದ ಕಾರಣ ಭಾರವೆಂಬುದು ಶೂನ್ಯವಾಗಿರುತ್ತದೆ. ಅದರಿಂದಲೂ ನಮಗೆ ಆಗುವುದು ಸಂತೋಷವೇ ಅಲ್ಲವೆ?' ಎಂದು ನರಹರಿ ನಕ್ಕ.

ಎಂಥ ನಗು! ಎಂದು ವಿಸ್ಮಿತನಾದ ಅಭಿ. ಈ ವಿಷಯದ ಬಗ್ಗೆ ಇನ್ನು ಏನೂ ಮಾತಾಡಲು ಇಲ್ಲ ಎಂದುಕೊಂಡು ಸ್ವಲ್ಪ ಹೊತ್ತು ಮೌನವಾಗಿದ್ದ ಅಭಿ ಹೇಳಿದ, 'ನಾವು ಹೋಗುವಾಗಲೂ ಯಾರಿಗೂ ಭಾರವಾಗಬಾರದು, ಹೋದ ನಂತರವೂ ಭಾರವಾಗಬಾರದು, ಅಲ್ಲವೇನಪ್ಪಾ?'

'ನಿಜ ಅಭಿ. ಆ ವಿಚಾರ ನನ್ನ ಮನಸ್ಸಿನಲ್ಲಿಯೂ ಇದೆ. ಕೊನೆಗೆ ಮಣ್ಣಾಗಲಿರುವುದು ಬೇಡ. ಯಾರಿಗಾದರೂ ಪ್ರಯೋಜನಕ್ಕೆ ಬಂದೀತು, ಆದ್ದರಿಂದ ಅದನ್ನು ದಾನವಾಗಿ ನೀಡಿ, ತೆಗೆದುಕೊಳ್ಳಿ ಎಂದು ಬರೆದಿಟ್ಟು ಹೋಗೋಣ'

'ಹೌದು ಅಪ್ಪಾ, ಹಾಗೆ ಮಾಡೋಣ. ಬದುಕಿರುವಾಗ ಸರ್ವ ಬಂಧಗಳಿಂದಲೂ ಮುಕ್ತವಾಗಿರುವ ಬಯಕೆ ಫಲಿಸುವುದಿಲ್ಲ ಎಂದು ನಾನು ಅನುಭವದಿಂದ ಕಂಡಾಗಿದೆ. ನೀನು ಅದನ್ನೇ ಜ್ಞಾನದ ಮೂಲಕ ಕಂಡಿದ್ದಿ' ಇಬ್ಬರೂ ಒಂದಷ್ಟು ಹೊತ್ತು ಹರ್ಷಚಿತ್ತರಾಗಿ ಮೌನವಾಗಿ ಕುಳಿತರು.

ಮರುದಿನ ಅಭಿ ಹೇಳಿದ, 'ನಾವು ನಮ್ಮ ಬದುಕನ್ನು ನೈಸರ್ಗಿಕವಾಗಿ ಮುಗಿಸಲು ಆಗುವುದಿಲ್ಲ. ಸಂತೋಷದಿಂದ ಬದುಕೋಣ. ಸಕ್ರಿಯವಾಗಿ ಸಾವು ಎಂಬುದಿಲ್ಲ ಎಂಬಂತೆ ಜೀವಿಸೋಣ. ದೇವರು ದೇವಾಲಯ, ತೀರ್ಥಕ್ಷೇತ್ರ ಎಲ್ಲವನ್ನೂ ಕಂಡಾಯಿತು. ಇನ್ನು ಅದು ಯಾವುದೂ ಬೇಡ. ಸಮಾಜದಲ್ಲಿ ಎಲ್ಲರೂ ಬದುಕುವಂತೆ, ಎಲ್ಲರೊಡನೊಂದಾಗಿ ಬದುಕೋಣ. ಅಲ್ಲವೆ ಅಪ್ಪಾ?'

'ಹೌದು ಅಭಿ'

'ಸಮಾಜದಲ್ಲಿ ನಮಗೆ ನಾವೇ ಬೇರೆ ಯಾರೂ ಬೇಡ ಎಂಬಂತೆ ಇರುವುದು ಬೇಡ. ನಾಳೆಯೇ ನಾವು ಬೆಂಗಳೂರಿಗೆ ಹೋಗೋಣ. ಹೊಸೂರಿಗೆ ಹೋಗಿ ಮುರಾರಿಯನ್ನು ಕಂಡು ಬರೋಣ. ನಾನು ನಿನ್ನನ್ನು ಹುಡುಕಲು ಮನೆಯಿಂದ ಹೊರಟ ದಿನದಿಂದ ನನಗೆ ಅವನ ಸಂಪರ್ಕ ಇಲ್ಲ. ನಮ್ಮ ಮುಂದಿನ ಬದುಕಿಗೆ ಅವನ ಅಗತ್ಯ ಇದೆ. ಒಂದು ವೇಳೆ ಅವನು ನಮಗೆ ಅಲಭ್ಯ ಎಂದಾದರೆ ಬೇರೆ ದಾರಿ ನೋಡೋಣ' ಎಂದ ಅಭಿ.

ಅಭಿ ಮತ್ತು ನರಹರಿ ಬೆಂಗಳೂರಿಗೆ ಎರಡು ದಿನಗಳ ನಂತರ ಹೋಗೋಣ ಎಂದುಕೊಳ್ಳುತ್ತಿರುವಾಗ ಸೂರ್ಯಕಾಂತ ರಾನಡೆ ಬಂದರು. ನರಹರಿ ಅಭಿಗೆ ರಾನಡೆಯ ಪರಿಚಯ ಮಾಡಿಸಿದರು.

'ಕಳೆದ ವರ್ಷ ನಾನು ಇಲ್ಲಿಗೆ ಎರಡು ಬಾರಿ ಬಂದಿದ್ದೆ. ಮೊದಲ ಸಲ ಬಂದಾಗ ಬಾಗಿಲಿಗೆ ಬೀಗ ಹಾಕಿತ್ತು. ಸ್ವಲ್ಪ ಹೊತ್ತು ಜಗಲಿಯಲ್ಲಿ ಕುಳಿತಿದ್ದು ಎದ್ದು ಹೋದೆ. ನೀವು ಎಲ್ಲಿಗೆ ಹೋಗಿದ್ದಿರಿ?' ಎಂದು ರಾನಡೆ ಕೇಳಿದರು. ಇಂಥ ಸಂದರ್ಭದಲ್ಲಿ ಸತ್ಯ ಹೇಳಿ ವಿವರಿಸುವುದು ಸಾಧ್ಯವಿಲ್ಲ, ಸುಳ್ಳು ಹೇಳಲು ಮನಸ್ಸು ಒಪ್ಪುವುದಿಲ್ಲ, ಏನು ಹೇಳುವುದು ಎಂದು ಯೋಚಿಸಿ ನರಹರಿ, 'ಇಲ್ಲಿ ಯಾರನ್ನೂ ಕಾಣಲಿಲ್ಲವೆ?' ಎಂದು ಕೇಳಿದ ನರಹರಿ.

(ಸಶೇಷ)